ಪ್ರವಚನ ಇಟ್ಟುಕೊಂಡು, ಜೀವನೋಪಾಯ ರೂಪಿಸಿಕೊಳ್ಳಲಿ.' ಅವಳು ಆಡುವ ಮಾತಲ್ಲಿ ಅಭಾವದ, ಅನುಭವದ ವಾಸ್ತವಾಂಶದ ಕಟುಸತ್ಯ ಗೋಚರವಾಗುತ್ತದೆ.

ಈಗ ಪುತ್ರಿ ಮಹನ್ಯ ಆಗೊಮ್ಮೆ ಈಗೊಮ್ಮೆ ತನ್ನ ಬಾಲ್ಯಕ್ಕೆ ಜಾರುತ್ತಾಳೆ. ಹತ್ತಿರದ ಮನೆಯ ಮಗು ಅವಳಲ್ಲಿ ಎಳೆತನದ ಮೆಲುಕು ಹಾಕಿಸುತ್ತದೆ. ಆ ಮಗುವೂ ಒಂದಿಲ್ಲೊಂದು ಕಾರಣಕ್ಕೆ ಶಾಲೆ ತಪ್ಪಿಸಿ, ವಿಜಯಶಾಲಿಯಂತೆ ಮನೆಯಲ್ಲಿ ಆಟದಲ್ಲಿ ಮಗ್ನನಾಗಿರುತ್ತಾನೆ. ಅದನ್ನು ಕಂಡಾಗ ಮಹನ್ಯ ಹೇಳುವುದುಂಟು. 'ಇಷ್ಟು ಪುಟ್ಟಮಕ್ಕಳು ಹಾಯಾಗಿ ಮನೇಲಿರಬೇಕು. ಅದ ಬಿಟ್ಟು ಮಳೆ, ಚಳಿ, ಗಾಳಿ ಅನ್ನದೆ ಗೋಳು ಹೊಯ್ಕೋಬಾರದು. ಈ ಮಗು ಯಾವುದೋ ಜನ್ಮದಲ್ಲಿ ನನ್ನ ತಮ್ಮ ಆಗಿರಬೇಕು.' ಅವನು ಶಾಲೆಗೆ ಹೊರಡಲು ಮಾಡುವ ತಕರಾರು, ಅವನ ಪೋಷಕರಲ್ಲಿ ಸಿಟ್ಟು ತರಿಸಿದರೆ, ಮಹನ್ಯಳ ಮೊಗದಲ್ಲಿ ಸಂತಸ ನೃತ್ಯವಾಡುತ್ತದೆ. ಆ ಮಗು, ಅವನಣ್ಣ ಒಂದೇ ಬಸ್ಸಿನಲ್ಲಿ, ಒಂದೇ ಸ್ಟಾಪಿಂದ ಶಾಲೆಯ ಬಸ್ ಏರುತ್ತಾರೆ. ಏರಬೇಕು ಕೂಡ. ಚಿಕ್ಕವನು ಚಾಲಾಕಿತನದಿಂದ ಮನೆ ಸೇರುತ್ತಾನೆ. ಕೇಳಿದವರಿಗೆ ಅಷ್ಟೇ ಮುಗ್ಧವಾಗಿ 'ನನಗೆ ಬಸ್ ಮಿಸ್ ಆಯಿತು'. ಪುಟ್ಟು ಶಾಲೆಗೆ ಹೋಗಿಯಾಯಿತೇ ಎಂದು ನೋಡಿ ಹೋಗಲು ಬರುವ ಅಜ್ಜಿಯ ಸೊಂಟ ಕೊಂಡಾಟದಿಂದ ಹತ್ತಿ, 'ನಡಿ ಅಜ್ಜಿ, ನಿಮ್ಮನೆಗೆ ಹೋಗಿ ಅಡುಗೆ ಮಾಡೋಣ' ಎನ್ನುತ್ತಾನೆ ಈ ಚಿತ್ತಚೋರ. ಮಹನ್ಯಳಂತೂ 'ಅಮ್ಮ, ಪಾಪು ಏಷ್ಟು ಚೆನ್ನಾಗಿ ಹಟ ಮಾಡಿ ತಪ್ಪಿಸಿಕೋತಾನೆ ನೋಡು' ಎಂದು ಹಿಗ್ಗುತ್ತಾ, ನೆನಪಿನ ದೋಣಿಯಲ್ಲಿ ಪ್ರಯಾಣ ಆರಂಭಿಸುತ್ತಾಳೆ. 'ನಾನು ಎಲ್.ಕೆ.ಜಿಯಿಂದ ಯು.ಕೆ.ಜಿಗೆ ಹೋದಾಗ, ರಮಾ ಮಿಸ್ ಜೊತೇಲಿ ಬರಲಿಲ್ಲಾಂತ ಅತ್ತಿದ್ದೆ ಅಲ್ವಾ, ರಮಾ ಮಿಸ್ ಫೇಲ್ ಆಗಿ ಅದೇ ಕ್ಲಾಸಲ್ಲಿ ಉಳಿದುಬಿಟ್ಟರು. ನಾನು ಮಾತ್ರ ಪಾಸಾಗಿ ಮುಂದಕ್ಕೆ ಹೋದೆ ಅಂದುಕೊಂಡಿದ್ದೆ. ಹಾಗೆ ವಾಚ್‌ಮನ್ ಲಕ್ಷ್ಮಣ ಅಂಕಲ್ ಜೊತೆ ಆಟ ಆಡ್ತಿದ್ದೆ. ಅವರಿಗೆ ಈಗ ಎಷ್ಟು ವಯಸ್ಸು ಆಗಿರಬಹುದು? ಒಂದು ದಿನ ಹೋಗಿ ಅವರ ಬಗ್ಗೆ ವಿಚಾರಿಸಿಕೊಂಡು, ಸಾಧ್ಯವಾದರೆ ನೋಡಿಕೊಂಡು ಬರಬೇಕು. ಅಮ್ಮ ನಿನಗೆ ಬೇಜಾರೇ ಆಗಲಿಲ್ವಾ ನನ್ನ ವಿಚಾರದಲ್ಲಿ? ನಾನು ಸ್ಕೂಲಿಗೆ ಹೋಗದೆ ಹಾಗೆ ಉಳಿದುಬಿಟ್ಟರೆ ಅಂತ ನಿನಗೆ ಗಾಬರಿ ಆಗಲಿಲ್ವಾ?' ನನ್ನನ್ನು ಮೀರಿಸುವಂತೆ ಬೆಳೆದು ನಿಂತಿರುವ ಮಗಳಿಗೆ ಏನು ಉತ್ತರಿಸಲಿ. ಸರ್ವರ ಪ್ರಗತಿಗೆ ಶಾಲೆಯ ಪಾಠವೇ ಸಕಲವೂ ಎನ್ನಲೇ? ಇಲ್ಲ ಉದ್ಯೋಗಸ್ಥ ಮಾತೆಯರಿಗೆ ಮಕ್ಕಳನ್ನು ಶಾಲೆಗೆ ಕಳಿಸುವುದೇ ಪಾಲನಾ, ಸಂರಕ್ಷಣಾ ಸಮಸ್ಯೆಗಿರುವ ಪರಿಹಾರ ಎನ್ನಲೇ? ಒಟ್ಟು ಮಕ್ಕಳು ಬೆಳೆದಂತೆ ಅವರ ಪ್ರಶ್ನೆಗಳ ಪಟ್ಟಿಯೂ ಬೆಟ್ಟವಾಗಿ ಬೆಳೆಯುತ್ತದೆ. ಉತ್ತರ ಹುಡುಕಲಾರದ ಪ್ರಶ್ನೆಗಳೇ ನಮ್ಮನ್ನು ಮುತ್ತಿರುತ್ತದೆ, ಮುತ್ತಿಡುತ್ತದೆ.

## ಸಾಯಿಲಕ್ಷ್ಮೀ ಎಸ್.

ಹುಟ್ಟೂರು ಮುಂಬೈ. ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೋಮಾ ಪಡೆದ ಸಾಯಿಲಕ್ಷ್ಮೀ, ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಹಿರಿಯ ಕಾರ್ಯಕ್ರಮ ಅಧಿಕಾರಿ.

'ಹೋಗುವೆ ನಾನು ಶಾಲೆಗೆ' ಎಂಬ ಮಕ್ಕಳ ಕಥನ ಕವನ ಸಂಕಲನ ಮತ್ತು 'ಸಂಧೀಲಿ ಸಮಾರಾಧನೆ', 'ಕರೆಯದೆ ಹೋದರೂ...', 'ಚೌತಿಯ ಗುಗ್ಗರಿ' ಇವು ಹಾಸ್ಯ ಸಂಕಲನಗಳು. ಕಾದಂಬರಿ 'ಹೂ ಬತ್ತಿ' ಸದ್ಯದಲ್ಲೇ ಪ್ರಕಟವಾಗಲಿದೆ. ಇವರು ರಚಿಸಿ, ರೂಪಿಸಿದ 'ಸರ್ಕಸ್ ಆನೆ ನಲ್ಲಿ' ಗೀತ ರೂಪಕಕ್ಕೆ ಆಕಾಶವಾಣಿ ಕೊಡಮಾಡುವ ರಾಷ್ಟ್ರೀಯ ಪುರಸ್ಕಾರ ಲಭಿಸಿದೆ.